# ಗಮಕ ಶಿಕ್ಷಕ ಪ್ರಶಿಕ್ಷಣ – ವಿಶೇಷ ವರದಿ

ಕ.ಗ.ಕ.ಪರಿಷತ್ತು 2020–2023ರ ತ್ರಿವರ್ಷದ ಅವಧಿಯಲ್ಲಿ ಅನುಷ್ಠಿಸಲು ಯೋಜಿಸಿರುವ ಅನೇಕ ಚಟುವಟಿಕೆಗಳಲ್ಲಿ ಒಂದು **ಗಮಕ ಶಿಕ್ಷಕ ಪ್ರಶಿಕ್ಷಣ ಶಿಬಿರ**. ಈ ಕಾರ್ಯಕ್ರಮದ ಉದ್ದೇಶವೆಂದರೆ ರಾಜ್ಯದೆಲ್ಲೆಡೆ ನಡೆಯುತ್ತಿರುವ ಗಮಕ ತರಗತಿಗಳಲ್ಲಿ ಬೋಧಿತವಾಗುವ ಪಠ್ಯದ ವಾಚನಾವೈಖರಿ, ಸಾಹಿತ್ಯ ವಿಂಗಡಣೆ, ಪ್ರಸ್ತುತಿ, ಅರ್ಥವಿವರಣೆ, ರಾಗರಸಜೋಡಣೆ, ಇತ್ಯಾದಿ ವಿಧಾನಗಳು ಏಕರೀತಿಯಲ್ಲಿರಬೇಕು ಎಂಬುದು. ಇಂತಹ ಏಕಸೂತ್ರವನ್ನು ಅನುಸರಿಸಿದಾಗ ವಿದ್ಯಾರ್ಥಿಗಳು ಎಲ್ಲಿಯೇ ಕಲಿತರೂ ಒಂದು ನಿರ್ದಿಷ್ಟ ವಿಧಾನದಲ್ಲಿ ಕಲಿತಂತಾಗುವುದು. ಜೊತೆಗೆ ವಿವಿಧ ಹಿನ್ನೆಲೆಯ ಶಿಕ್ಷಕರಲ್ಲಿಯೂ ಆಗಾಗ ಏಳಬಹುದಾದ ಸಂದೇಹಗಳು, ಪ್ರಶ್ನೆಗಳಿಗೆ ಸಮಾಧಾನ ದೊರೆತು ಅವರ ಶಿಕ್ಷಾಕ್ಷಮತೆ, ಆತ್ಮವಿಶ್ವಾಸಗಳು ಹೆಚ್ಚುವುದು ಮುಖ್ಯ ವಿಷಯ.

ಈ ಶಿಬಿರಕ್ಕಾಗಿ ಮೇ 2021ರಲ್ಲಿ ಪ್ರಶಿಕ್ಷಣ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸುವುದು, ಪ್ರಶಿಕ್ಷಣಕ್ಕೆ ಪಠ್ಯಸಾಮಗ್ರಿಯ ಆಯ್ಕೆ, ಯೋಜನೆಯ ಘೋಷಣೆ, ಭಾಗಿಗಳಿಗೆ ಆಹ್ವಾನ, ಹೆಸರು ನೋಂದಾವಣೆ ಈ ಎಲ್ಲವನ್ನೂ ಪೂರೈಸಲಾಯಿತು. ಆಹ್ವಾನವನ್ನು ಘೋಷಿಸಿದ್ದು ಸುಮಾರು ಐವತ್ತು ಮಂದಿಗೆ. ಅದರಲ್ಲಿ ಸ್ಪಂದನೆ ದೊರೆತದ್ದು 36 ಜನರಿಂದ. ಇದು ಪ್ರಯತ್ನಕ್ಕೆ ಉತ್ತೇಜಕವಾಗಿಯೇ ಇದ್ದಿತು.

ಸಂಪನ್ಮೂಲ ವ್ಯಕ್ತಿಗಳಾಗಿ ಮಹನೀಯರಾದ ಸಂತೋಷ ಭಾರದ್ವಾಜರು, ಜಿ. ದಕ್ಷಿಣಾಮೂರ್ತಿ, ಶ್ರೀಮತಿ ಜಯಲಕ್ಷ್ಮೀ ಗೋಪೀನಾಥರು, ಶ್ರಿಮತಿ ಶಾಂತಾ ನಾಗಮಂಗಲ (ಬೆಂಗಳೂರು), ರೇಣುಕಾಪ್ರಸಾದರು (ತುಮಕೂರು), ವಿನಾಯಕರು (ಶಿವಮೊಗ್ಗ), ಡಾ. ರಾಜೀವಲೋಚನರು (ಚಿತ್ರದುರ್ಗ), ಗಣಪತಿ ಭಟ್ ಕುಳಮರ್ವರು (ದ.ಕ.), ನಿರಂಜನರು ಮತ್ತು ಕೃ.ಪಾ.ಮಂಜುನಾಥರು (ಮೈಸೂರು) ಯೋಜನೆಯನ್ನು ನಡೆಸಲು ಕೃಪೆಯಿಟ್ಟು ಒಪ್ಪಿದವರು.

ಪರಿಷದಧ್ಯಕ್ಷರಾದ ಶ್ರೀಮತಿ ಗಂಗಮ್ಮ ಕೇಶವಮೂರ್ತಿಯವರ ತರಬೇತಿ, ಮಾರ್ಗದರ್ಶನದಲ್ಲಿ ಪ್ರಶಿಕ್ಷಾರ್ಥಿಗಳು, ಮತ್ತು ವಿಶೇಷ ಪ್ರತಿಭೆಯ ವಿದ್ಯಾರ್ಥಿಗಳು ಪ್ರಶಿಕ್ಷಣದ ಪಠ್ಯಭಾಗವನ್ನು ಪೂರ್ವನಿಗದಿಯಂತೆ ನಿತ್ಯವೂ ಚೇತೋಹಾರಿಯಾಗಿ ವಾಚನಮಾಡಿದರು. ಇದಕ್ಕೆ ಸಮ್ಯಕ್ಕಾಗಿ ಸಾಹಿತ್ಯದ ವಿವರಣೆ, ಹಿನ್ನೆಲೆಗೆ ಪ್ರಸಂಗಗಳನ್ನು ಸಂಪನ್ಮೂಲ ಹಿರಿಯರು ಸಾರ್ಥಕವಾಗಿ ನಡೆಸಿಕೊಟ್ಟರು.

ಪ್ರಶಿಕ್ಷಣ ಶಿಬಿರವು ಜೂನ್ 03, 2021, ಬುಧವಾರದಿಂದ ಪ್ರತಿ ಬುಧವಾರ ಮತ್ತು ಶನಿವಾರ ಸಂಜೆ 7.00ರಿಂದ 8.00ರವರೆಗಿನ ಒಂದು ಗಂಟೆ ಅವಧಿಯಂತೆ, ಆಗಸ್ಟ್ 7, 2021 ಬುಧವಾರದವರೆಗೆ 20 ಅವಧಿಗಳ ಕಾಲ ನಡೆಯಿತು. ಶಿಬಿರದ ಉದ್ಘಾಟನಾ ಕಾರ್ಯಕ್ರಮವನ್ನು ಗಮಕಿಗಳೂ, ಪ್ರತಿಷ್ಠಿತ ಶ್ರೀ ವಿದ್ಯಾಗಣಪತಿ ಪ್ರಕಾಶನದ ಸ್ಥಾಪಕರೂ ಆದ 98 ವರ್ಷದ ಹಿರಿಯರಾದ ಶ್ರೀ ಎ.ಎನ್. ಗಂಗಾಧರ ಶಾಸ್ತ್ರಿಗಳು ಜರುಗಿಸಿಕೊಟ್ಟರು. ಆಗಸ್ಟ್ 07, 2021ರ ಸಮಾರೋಪವನ್ನು ಗಮಕಬಂಧುಗಳೂ, ಹಿರಿಯರೂ ಆದ ಶ್ರೀ ನಾಗರಾಜ ಅವರು ನಿರ್ದೇಶಿಸಿ ಮಾತನಾಡಿ, ಪರಿಷತ್ತಿನ ಈ ವಿಶೇಷ ಪರಿಶ್ರಮವನ್ನೂ, ಒಟ್ಟು ಚಟುವಟಿಕೆಗಳನ್ನೂ ಪ್ರಶಂಸೆ ಮಾಡಿದರು.

ಶಿಬಿರದ ಕೊನೆಯ ಅವಧಿಯಾದ ಅಂದು ಪ್ರಶಿಕ್ಷಾರ್ಥಿಗಳಿಂದ ಲಿಖಿತರೂಪದಲ್ಲಿ ಪ್ರಕಟವಾದ ಮನೋಗತ ಅಭಿಪ್ರಾಯಗಳನ್ನು ಓದಲಾಯಿತು. ಒಟ್ಟು ಅಭಿಪ್ರಾಯದಲ್ಲಿ ಪ್ರಶಿಕ್ಷಾರ್ಥಿಗಳು ಈ ಶಿಬಿರದ ರೂಪು–ರೇಷೆ, ಅನುಷ್ಠಾನ ವ್ಯವಸ್ಥೆ, ವಿಷಯಪ್ರಸ್ತುತಿಯ ಕ್ರಮ, ಎಲ್ಲವೂ ನಿರೀಕ್ಷೆಯನ್ನು ಮೀರಿ ಉಪಯುಕ್ತವಾಗಿತ್ತೆಂಬುದನ್ನೂ, ಇಂತಹ ಪ್ರಶಿಕ್ಷಣ ಶಿಬಿರಗಳು ಪುನರಪಿ ನಡೆಸಬೇಕೆಂಬ ಆಶಯವನ್ನೂ ವ್ಯಕ್ತಪಡಿಸಿದರು.

ಈ ಶಿಬಿರವು ಅಚ್ಚುಕಟ್ಟಾಗಿ ನಡೆಸುವುದರಲ್ಲಿ ಪರಿಷದಧ್ಯಕ್ಷರ ನೇತೃತ್ವದ ಆಡಳಿತ ಮಂಡಳಿ, ಸಂಪನ್ಮೂಲ ಬುಧರು, ಶ್ರದ್ಧಾಳು ಪ್ರಶಿಕ್ಷಾರ್ಥಿಗಳು, ಹಲವಾರು ಅವಧಿಗಳಿಗೆ ಝೂಮ್ ಜಾಲಮಾರ್ಗದ ಸೌಲಭ್ಯವನ್ನು ಒದಗಿಸಿದ ಸಹೃದಯೀ ಗಮಕಬಂಧುಗಳು – ಹೀಗೆ ಎಲ್ಲರೂ ಶ್ರಮಭಾಗಿಗಳು, ಸಮಭಾಗಿಗಳು. ಇಷ್ಟನ್ನೂ ಸೇರಿಸಿ ಸ್ಥೂಲವಾಗಿ ಹೇಳುವುದಾದರೆ, ಈ ಪ್ರಶಿಕ್ಷಣ ಶಿಬಿರವು ಎಲ್ಲರಿಗೂ ಸಂತೋಷವನ್ನೂ, ಪ್ರಯೋಜನವನ್ನೂ ದೊರಕಿಸಿದ ಒಂದು ಉತ್ತಮ ಪ್ರಯತ್ನವಾಗಿ ಹೆಸರಾಯಿತು. ಇದು ಪರಿಷತ್ತಿಗೆ ಸಮಾಧಾನದ ಸಂಗತಿ.